ನವಿರಾದ ಬರಹಗಳ ಮೂಲಕ ಓದುಗರ ಮನಸ್ಸನ್ನು ತಟ್ಟುವ ಸುಧಾ ಆಡುಕಳ ಕವಯಿತ್ರಿ ಕೂಡ. ಮೂಲತಃ ಉಡುಪಿಯವರು. ‘ಬಕುಲದ ಬಾಗಿಲಿನಿಂದ’ ಎಂಬ ಲೇಖನ ಸಂಕಲನ, ‘ಯಶವಂತನ ಯಶೋಗೀತೆ’, ‘ಹದಿಹರೆಯದ ಕನಸುಗಳೊಂದಿಗೆ’, ‘ಮಗುವಿನ ಭಾಷೆ ಮತ್ತು ಶಿಕ್ಷಕ’, ‘ಮಕ್ಕಳ ಟ್ಯಾಗೋರ್’ ಅವರ ಪ್ರಮುಖ ಕೃತಿಗಳು.

ಹೊಳೆಯ ಕಟ್ಟುಗಳನ್ನು ಮುರಿಯುತ್ತಿದ್ದುದು. ಹಾಗೆ ಕಟ್ಟು ಮುರಿಯುವ ಮೊದಲದಿನ ಕಾಡಿನಿಂದ ಕುಕ್ಕುಸನ ಸೊಪ್ಪನ್ನು ತಂದು ದೊಡ್ಡ ಕಡಾಯಿಯಲ್ಲಿ ಬೇಯಿಸಿ, ಸಂಗ್ರಹವಾದ ನೀರಿನಲ್ಲಿ ಕಲಸಿ ಮೀನುಗಳಿಗೆ ಮತ್ತೇರುವಂತೆ ಮಾಡಲಾಗುತ್ತಿತ್ತು. ಅಮಲಾದ ಮೀನುಗಳು ಕಟ್ಟಿನ ತೂಬುಗಳಲ್ಲಿಟ್ಟ ಕೂಳಿ(ಬೆತ್ತದಿಂದ ಮಾಡಿದ ಶಂಕುವಿನಾಕಾರದ ಬುಟ್ಟಿ)ಗಳಿಗೆ ಬಂದು ಬೀಳುತ್ತಿದ್ದವು. ಹೀಗೆ ಭತ್ತದ ಸುಗ್ಗಿಯ ಮಾರನೇ ದಿನವೇ ಮೀನುಗಳ ಸುಗ್ಗಿಯೂ ನಡೆದು ಇಡಿಯ ಊರಿಗೆ ಊರೇ ಮೀನುಸಾರಿನ ಘಮದಲ್ಲಿ ಮುಳುಗಿ ಗೌಲಾಗುತ್ತಿತ್ತು.

ಹಾಗೆಂದೂ ನಮ್ಮೂರ ಹೊಳೆ ಅಷ್ಟೇನೂ ಸಾಚಾ ಆಗಿರಲಿಲ್ಲ. ಮಳೆಗಾಲ ಶುರುವಾಗುತ್ತಿದ್ದಂತೆ ಎಲ್ಲಾ ದಾರಿಗಳನ್ನೂ ಆವರಿಸಿ ಊರಿನ ಆ ಭಾಗದಲ್ಲಿರುವ ಶಾಲೆಯನ್ನು ದೂರಾಗಿಸುತ್ತಿತ್ತು. ಒಂದೆರಡು ವಾರ ಈ ಅಯಾಚಿತ ರಜೆಯು ಮಜಾ ಅನಿಸಿದರೂ ದಿನಗಳೆದಂತೆ ಇಡೀ ದಿನ ಸುರಿವ ಮಳೆಯನ್ನು, ತುಂಬಿಹರಿವ ಹೊಳೆಯನ್ನೂ ನೋಡುತ್ತ ಕುಳಿತುಕೊಳ್ಳುವುದು ಶಿಕ್ಷೆಯಂತೆ ಭಾಸವಾಗುತ್ತಿತ್ತು. ಜತೆಗೆ ಶಾಲೆಯಲ್ಲಿ ಕೊಡುತ್ತಿದ್ದ ಉಪ್ಪಿಟ್ಟಿನ ರುಚಿಯೂ ನೆನಪಾಗಿ ಹೊಳೆಯ ಮೇಲೆ ಸಿಟ್ಟು ಉಕ್ಕೇರುತ್ತಿತ್ತು. ನಾಲ್ಕಾರು ತಿಂಗಳುಗಳ ಕಾಲ ಪರವೂರಿನಿಂದ ಬರುವವರನ್ನೂ ಬರದಂತೆ ಮಾಡಿ ಅಪರೂಪಕ್ಕೆ ಅವರು ತರುತ್ತಿದ್ದ ಪಾರ್ಲೆಜಿ ಬಿಸ್ಕೀಟಿಗೂ ಕಲ್ಲು ಹಾಕುತ್ತಿತ್ತು. ಕೆಲವೊಮ್ಮೆ ತೀರ ಬೇಸರವಾದಾಗ ದೊಡ್ಡ ಕೆಸುವಿನೆಲೆಯನ್ನೇ ಕೊಡೆಯಾಗಿಸಿಕೊಂಡು ನಮ್ಮೂರ ಗುಡ್ಡವನ್ನೇರಿ ನಾವೆಲ್ಲರೂ ಆಚೆಯ ಬಯಲಿನಲ್ಲಿರುವ ಶಾಲೆಯನ್ನು, ಅಲ್ಲಿ ನಡೆಯುವ ಚಟುವಟಿಕೆಯನ್ನೂ ದೂರದಿಂದಲೇ ನೋಡಿ ಸುಖಿಸುತ್ತಿದ್ದೆವು. ಹೊಳೆಯ ದಂಡೆಯಲ್ಲಿರುವ ಮರಗಳೆರಡನ್ನು ಜೋಡಿಸಿ, ನಡುವೆ ಹಾಕುತ್ತಿದ್ದ ಕಾಲುಸಂಕವೆಂಬ ಕಟ್ಟಿಗೆಯ ಎಳೆಯ ಮೇಲೆ ನಡೆಯುವ ಧೈರ್ಯ ಮಕ್ಕಳಾದ ನಮಗಿಲ್ಲದ್ದರಿಂದ ಅದರ ಮೇಲೆ ದಾಟುವ ಅಪ್ಪಂದಿರನ್ನು ನೋಡುತ್ತ ನಿಟ್ಟುಸಿರಾಗುತ್ತಿದ್ದೆವು. ಅಷ್ಟೇ ಅಲ್ಲ, ಬೇಸಿಗೆಯಲ್ಲಿ ಕೆಲವೊಮ್ಮೆ ಹೊಳೆದಂಡೆಯು ಸಾರಾಯಿ ಭಟ್ಟಿಯಿಳಿಸುವ ಅಡ್ಡೆಯೂ ಆಗುತ್ತಿತ್ತು. ಕಾಡಿನಿಂದ ಕಳ್ಳತನದಿಂದ ಕೊಯ್ದ ನಾಟುಗಳನ್ನು ಅಡಗಿಸಿಡುವ ತಾಣವಾಗಿಯೂ ಹೊಳೆ ಬಳಕೆಯಾಗುತ್ತಿತ್ತು. ಕೆಲವೊಮ್ಮೆ ಊರಿನಲ್ಲಿ ಕಾಣೆಯಾದವರನ್ನು ಕೊಂದು ಹೊಳೆಯಲ್ಲಿ ಮುಳುಗಿಸಿದ್ದಾರೆಂಬ ಸುದ್ದಿಯೂ ಹಬ್ಬಿ ನಮಗೆಲ್ಲಾ ಭಯಹುಟ್ಟಿಸುವ ಜಾಗವಾಗಿಯೂ ಹೊಳೆ ಮಾರ್ಪಡುತ್ತಿತ್ತು.

ಇದ್ದಕ್ಕಿದ್ದಂತೆ ನಮ್ಮೂರ ಬಯಲಿಗೆ ದಾರಿ ಮಾಡಿಕೊಂಡು ಬಂದಿಳಿದ ಹೆಂಚಿನ ಮಣ್ಣಿನ ಲಾರಿಗಳು ಊರಿನ ಚಹರೆಯನ್ನೇ ನಿಧಾನವಾಗಿ ಬದಲಿಸುತ್ತ ಬಂದವು. ವರ್ಷವಿಡೀ ಕೃಷಿಮಾಡಿ ಗಳಿಸುವ ಹಣದ ದುಪ್ಪಟ್ಟು ಹಣಪಡೆದ ನನ್ನೂರ ಜನಗಳು ಗದ್ದೆಯ ಮಣ್ಣನ್ನು ಹೆಂಚಿನ ಕಾರ್ಖಾನೆಗೆ ಮಾರಿಕೊಂಡರು. ಲಾರಿಗಳಿಗೆ ಮಣ್ಣುತುಂಬಿಸುವ ಕೆಲಸಕ್ಕೆ ಬೆಳಗು ಹರಿವ ಮುನ್ನವೇ ಹೋಗಲಾರಂಭಿಸಿದರು. ಎಲ್ಲೆಲ್ಲಿಯೂ ಹರಡಿಕೊಂಡ ಮಣ್ಣಿನ ದೂಳಿಗೆ ಬೇಸಿಗೆಯಲ್ಲಿಯೇ ಹೊಳೆ

